ವಾರದ ಪತ್ರ

## ವೀಕ್ಷಕರಿಗೂ ರಜೆ ನೀಡಲಿ

ಧಾರಾವಾಹಿಗಳಲ್ಲಿ ಕಥೆಯ ತಿರುಳೇ ಇರುವುದಿಲ್ಲ ವಾರದಲ್ಲಿ 5–6 ದಿನ ನೋಡಬೇಕಾದರೆ ಒಂದು ರೀತಿಯ ಹಿಂಸೆ ಉಂಟಾಗುತ್ತದೆ. ಅಂತಹದರಲ್ಲಿ ವರ್ಷದಲ್ಲಿ ಬರುವ ಹಬ್ಬಹರಿದಿನಗಳನ್ನು ಈ ಸೆಲೆಬ್ರಿಟಿಗಳು ಆಚರಿಸುವುದನ್ನು ಬೇರೆ ನೋಡಬೇಕು ಇದು ಯಾವ ಕರ್ಮ? ಎಲ್ಲ ವಾಹಿನಿಗಳ ಧಾರಾವಾಹಿ ಕಂತುಗಳು ಹಬ್ಬ ಆಚರಿಸುವುದನ್ನು ಕಡ್ಡಾಯ ಮಾಡಿಕೊಂಡಿವೆ. ಅದು ಹಬ್ಬ ಒಂದು ದಿನವಾದರೆ ಧಾರಾವಾಹಿ ಕಂತುಗಳು ಒಂದು ವಾರ ಮುಂದುವರಿಸುತ್ತಾರೆ. ಹಬ್ಬದ ಕಂತುಗಳಲ್ಲಿ ಧಾರಾವಾಹಿ ಅಂಶಗಳನ್ನು ಸೇರಿಸದೆ ಕೇವಲ ಹಬ್ಬದ ಬಗ್ಗೆಯೇ ತೋರಿಸಿದರೆ ಅದು ವೀಕ್ಷಕನಿಗೆ ಇಷ್ಟ ಇದ್ದರೆ ನೋಡುತ್ತಾನೆ, ಇಲ್ಲ ಬಿಡುತ್ತಾನೆ. ಆ ವಾರ ವೀಕ್ಷಕನಿಗೂ ಬಿಡುವು ಸಿಕ್ಕಂತೆ ಆಗುತ್ತದೆ, ನೆಮ್ಮದಿಯೂ ಇರುತ್ತದೆ.

—ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ಅತ್ತೆ ಸೊಸೆಯ ಸೌಹಾರ್ದತೆ

ಹೆಣ್ಣಿಗೆ ಹೆಣ್ಣೇ ಶತ್ರುವಾದಂತೆ ತೋರಿಸಿರುವ, ಬಹುತೇಕ ಕನ್ನಡ ಧಾರಾವಾಹಿಯಲ್ಲಿ ಅತ್ತೆಸೊಸೆಯ ಸೌಹಾರ್ದತೆ, ಪ್ರೀತಿ, ಅಂತಃಕರಣ ಝೀ ಕನ್ನಡದ ‘ಮಿಥುನ ರಾಶಿ’ಯಲ್ಲಿ ಕಾಣಿಸುತ್ತಿದೆ. ಸದಾ ಗಂಟು ಮುಖದ ಮಿಥುನ, ಅರಳು ಹುರಿದಂತೆ ಮಾತನಾಡುವ ರಾಶಿ, ಮನೆಯಲ್ಲೇ ಬಂಧುಗಳ ಪಿತೂರಿ ಇದ್ದೇ ಇದೆ. ಆದರೂ ರಾಶಿಯ ಅತ್ತೆಯ ಅಂತಃಕರಣ, ರಾಶಿಯ ಅಕ್ಕ ಸುರಕ್ಷಾಳ ಶ್ರೀಮಂತಿಕೆಯ ಅಪೇಕ್ಷೆ. ಸುಂದರವಾಗಿ ನಿರೂಪಿಸಿ, ಮಧ್ಯಮ ವರ್ಗದವರ ಆಸೆ, ಆಕಾಂಕ್ಷೆ ಪ್ರಸಾರ ಮಾಡುವ ಅಪರೂಪದ ಕಥೆ.

—ಶ್ರೀಧರ ರಾಯಪ್ಪ, ಬೆಂಗಳೂರು

## ಹಿತವೆನಿಸಿದ ಕವನ

ಕಲರ್ಸ್ ಕನ್ನಡದ ‘ರಾಧಾ ರಮಣ’ ಧಾರಾವಾಹಿಯಲ್ಲಿ ಕಳೆದ ವಾರ ರಮಣ್ ಪತ್ನಿ ರಾಧಾಗೆ ಅಚ್ಚರಿ ನೀಡಲು ಹಿರಿಯಕವಿ ಎಚ್.ಎಸ್. ವೆಂಕಟೇಶಮೂರ್ತಿಯವರ ಮನೆಗೆ ಕರೆದುಕೊಂಡು ಹೋದದ್ದು ಬಿರುಬಿಸಿಲಿನಲ್ಲಿ ಹಿತವಾದ ಗಾಳಿ ಬೀಸಿದಂತಾಯಿತು. ರಾಧಾ, ಎಚ್‌ಎಸ್ವಿ ಕಾವ್ಯದ ಬಗೆಗೆ ಪಟಪಟನೆ ಮಾತಾಡಿದ್ದು ಎಚ್‌ಎಸ್ವಿ ತಮ್ಮ ಕವನವನ್ನು ವಾಚನ ಮಾಡಿದರು. ವೀಕ್ಷಕರನ್ನು ಬೇರೆಯದೇ ಲೋಕಕ್ಕೆ ಕರೆದೊಯ್ಯಿತು. ಕನ್ನಡದ ಹಿರಿಯ ಲೇಖಕರ ಜತೆಯಲ್ಲಿ ರಮಣ್ ಇಂಗ್ಲಿಷ್‌ನಲ್ಲೇ ಮಾತಾಡಿದ್ದು ಮಾತ್ರ ಸರಿ ಅನ್ನಿಸಲಿಲ್ಲ.

ಈ ತರಹದ ಪ್ರಯೋಗಗಳನ್ನು ಟಿ.ಎನ್. ಸೀತಾರಾಂರವರು ತಮ್ಮ ಸೀರಿಯಲ್‌ಗಳಲ್ಲಿ ಮಾಡಿದ್ದಾರೆ. ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿ, ತರಾಸು, ಅನಕೃ, ತ್ರಿವೇಣಿಯವರಂಥಹ ಶ್ರೇಷ್ಠರು ಇದ್ದಾಗ ಈ ಕಿರುತೆರೆ ಇದ್ದಿದ್ದರೆ ಅದೆಷ್ಟು ಸೊಗಸಾಗಿರುತ್ತಿತ್ತು.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಜ್ಞಾನದ ವೇದಿಕೆ

ಕನ್ನಡದ ಕೋಟ್ಯಧಿಪತಿ ಅಚ್ಚರಿ, ಬೆರಗು, ಕನಸು, ಭಾವುಕತೆಗಳನ್ನು ಒಳಗೊಂಡಿರುವ ಜ್ಞಾನವನ್ನು ಹೆಚ್ಚಿಸುವ ಕಾರ್ಯಕ್ರಮ. ಇದರಲ್ಲಿ ಶ್ರೀಸಾಮಾನ್ಯನೇ ಸೆಲೆಬ್ರಿಟಿ ಆಗಿರುತ್ತಾನೆ. ಸಾಮಾನ್ಯನೊಳಗೊಬ್ಬ ಅಸಾಮಾನ್ಯ ಯೋಜನೆಗಳಿರುತ್ತವೆ. ಭಾಷೆ, ಆಚಾರ, ವಿಚಾರ, ಸಿನಿಮಾ, ಕ್ರೀಡೆ, ರಾಜಕೀಯ ಮುಂತಾದ ವಿಷಯಗಳ ಬಗ್ಗೆ ತಿಳಿದುಕೊಳ್ಳಲು ಅನುಕೂಲ.

ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಆಸೆ ಇರುತ್ತದೆ. ಆದರೆ ಅಷ್ಟು ಸುಲಭವಲ್ಲ. ಕಾರ್ಯಕ್ರಮ ನೋಡುವಾಗ ಸಾಕಷ್ಟು ಉತ್ತರಗಳು ನಮಗೆ ತಿಳಿದಿರುತ್ತದೆ ‘ಅಯ್ಯೋ ನಾವೂ ಭಾಗವಹಿಸಬಹುದಿತ್ತಲ್ಲ’ ಎನಿಸುತ್ತದೆ. ಅಂತಹ ಅನುಕೂಲವನ್ನು ಈ ಭಾರಿಯ ಕನ್ನಡದ ಕೋಟ್ಯಧಿಪತಿ ಕಾರ್ಯಕ್ರಮದಲ್ಲಿ ಎಲ್ಲರೂ ಮೊಬೈಲ್ ಹಿಡಿದು ಆಟಗಾರನ ಜೊತೆ ಅದೇ ಸಮಯದಲ್ಲಿ Vootನಲ್ಲಿ ಆಡುವ ಅವಕಾಶ ಕೊಟ್ಟಿರುವುದು ನಿಜಕ್ಕೂ ಸಂತೋಷದ ವಿಷಯ. ನಾವು ಅದೇ ಸಮಯದಲ್ಲಿ ಆಡುತ್ತಾ ನಮ್ಮ ಜ್ಞಾನವನ್ನು ಪರೀಕ್ಷಿಸಿಕೊಳ್ಳಬಹುದು ಮತ್ತು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು. ಹಾಟ್ ಸೀಟ್‌ನಲ್ಲಿ ಪುನೀತ್ ರವರ ಜೊತೆ ಕುಳಿತುಕೊಳ್ಳದಿದ್ದರೂ ನಮ್ಮ ಮನೆಯ ಚಾಪೆಯ ಮೇಲೆ ಕುಳಿತು ನೇರ ಆಟ ಆಡಿ ನಮಗೆ ಬರುವ ಅಂಕಗಳನ್ನು ನಾವೇ ಪರೀಕ್ಷಿಸಿಕೊಳ್ಳುವುದು ಸಂತೋಷದ ವಿಷಯವೆ. ಬಹುಮಾನಗಳೂ ಕೊಡುವ ಆಶ್ವಾಸನೆ ಕೊಟ್ಟಿದ್ದಾರೆ. ಬಂದರಂತೂ ಇನ್ನೂ ಸಂತೋಷ.

—ವೀಣಾಶಂಕರ್, ಬೆಂಗಳೂರು

## ತರ್ಕಬದ್ಧ ಇರಲಿ

ನಾವೆಲ್ಲ ಕಳೆದ ಕೆಲವಾರು ವರ್ಷಗಳಿಂದ ‘ಲಕ್ಷ್ಮೀ ಬಾರಮ್ಮ’ ಧಾರಾವಾಹಿಯನ್ನು ನೋಡುತ್ತಾ ಬಂದಿದ್ದೇವೆ. ಅದೆಷ್ಟು ಬೇಸರವಾದರೂ ಬಿಡದೆ ನೋಡುತ್ತಿದ್ದೇವೆ. ಅದರಲ್ಲಿ ಶ್ರಾವ್ಯ ಎನ್ನುವವಳ ಆಸ್ತಿಯನ್ನು ಪಡೆಯಲು ಅವಳಂತೆಯೇ ಇರುವ ಶ್ರುತಿ ಎನ್ನುವವಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಬ್ಬರು ಒಂದೇ ರೀತಿ ಇರುವ ವ್ಯಕ್ತಿಗಳಾದರೆ ಆಸ್ತಿ ಪಡೆಯಲು ಸಾಧ್ಯವೇ? ನೋಡಲು ಒಂದೇ ರೀತಿ ಇದ್ದರೆ ಸಿಗ್ನೇಚರ್ (ಸಹಿ) ಇರುತ್ತದೆಯೇ? ಮನೆಯಲ್ಲೇ ಪೇಪರ್‌ಗೆ ಸಹಿ ಮಾಡಿಸಿಕೊಂಡರೆ ರಿಜಿಸ್ಟ್ರೇಷನ್ ಆಗುತ್ತದೆಯೇ ರಿಜಿಸ್ಟ್ರಾರ್ ಆಫೀಸಿನಲ್ಲಿ ಅವರ ಮುಂದೆಯೇ ಸಹಿ ಮಾಡಬೇಕಲ್ಲವೇ?

ಇದೆಲ್ಲ ಹೇಗೆ ಸಾಧ್ಯ. ಧಾರಾವಾಹಿ ತಯಾರಿಸುವವರು ವೀಕ್ಷಕರನ್ನು ಫೂಲ್ ಮಾಡಲು ಪ್ರಯತ್ನಿಸುತ್ತಿದ್ದಾರೇನೋ ಎಂಬುದು ನಮಗೆ ಬಹಳ ದೊಡ್ಡ ಅನುಮಾನ. ಬಲ್ಲವರು ದಯವಿಟ್ಟು ಸ್ಪಷ್ಟೀಕರಣ ನೀಡಬೇಕು.

—ಶ್ರೀಮತಿ, ಬೆಂಗಳೂರು

## ಅಂಕಿತಾಳಿಗೆ ಅಂಕೆ ಇಲ್ಲವೇ?

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಸೀತಾ ವಲ್ಲಭ’ ಧಾರಾವಾಹಿಯಲ್ಲಿ ಖಳನಾಯಕಿ ಅಂಕಿತಾಳ ಹುಚ್ಚಾಟ ಅತಿರೇಕವಾದದ್ದು. ಆರ್ಯ ಮತ್ತು ಮೈಥಿಲಿಯರ ದಾಂಪತ್ಯ ಜೀವನದಲ್ಲಿ ಮುಳ್ಳಾಗಿರುವ ಅಂಕಿತಾಳಿಗೆ, ಯಾವುದೇ ಅಂಕೆ ಇಲ್ಲದೆ ಪಾಪದ ಹೆಣ್ಣು ಮೈಥಿಲಿಗೆ ಹೆಜ್ಜೆ ಹೆಜ್ಜೆಗೂ ಕಾಟ ಕೊಡುತ್ತಿರುವ ಅಂಕಿತಾಳಿಗೆ ಕಡಿವಾಣ ಹಾಕುವವರಿಲ್ಲವೇ? ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಬಹುತೇಕ ಧಾರಾವಾಹಿಗಳಲ್ಲಿ ಖಳನಾಯಕಿಯರ ಉಪಟಳವೇ ಜಾಸ್ತಿ. ರಾಧಾ ರಮಣರ ದಾಂಪತ್ಯದಲ್ಲೂ ಸಹ ಖಳನಾಯಕಿ ದೀಪಿಕಾ ಮತ್ತೊಂದು ಉದಾಹರಣೆ. ಸದಭಿರುಚಿಯ ಕಥೆಯನ್ನು ಆಧರಿಸಿ ತಯಾರಿಸುವ ಬದಲು, ಬರೀ ಹೆಣ್ಣು ಮಕ್ಕಳನ್ನೇ ಖಳನಾಯಕಿಯರನ್ನಾಗಿ ಚಿತ್ರಿಸುತ್ತಿರುವ ನಿರ್ದೇಶಕರಿಗೆ ವಿವೇಚನೆಯಿಲ್ಲವೇ?

—ಬಿ. ಚಾಮರಾಜ ಅರಸ್, ಮೈಸೂರು

## ಡಿಎನ್‌ಎ ಪರೀಕ್ಷೆ ಸುಲಭ

ಕಲರ್ಸ್ ಸೂಪರ್‌ನ ‘ಮಗಳು ಜಾನಕಿ’ ಧಾರಾವಾಹಿಯಲ್ಲಿ ಡಿಎನ್‌ಎ ಟೆಸ್ಟ್ ಬಗ್ಗೆ ಇಬ್ಬರೂ ಲಾಯರ್‌ಗಳಿಗೆ ಸರಿಯಾದ ತಿಳಿವಳಿಕೆ ಇದ್ದಂತಿಲ್ಲ. ಆ ಪರೀಕ್ಷೆಗೆ ರಕ್ತದ ನಮೂನೆ ಅಗತ್ಯವಿಲ್ಲ. ಬಾಯಂಗಳವನ್ನು ಹತ್ತಿಯಿಂದ ಸವರಿ ಅದನ್ನು ಪರೀಕ್ಷಿಸಿದರೆ ಸಾಕು.

—ಡಾ. ಕ. ರಮೇಶ ಬಾಬು, ಹುಬ್ಬಳ್ಳಿ

ಸುಂದರ ಆಕೃತಿ: ‘ಮಗಳು ಜಾನಕಿ’ ಸುಂದರ ಕಲಾಕೃತಿ ಎನ್ನುವುದರಲ್ಲಿ ಸಂಶಯವಿಲ್ಲ. ಪ್ರತಿಯೊಂದು ಸಂಚಿಕೆಯಲ್ಲಿಯೂ ಜೀವನದ ಮೌಲ್ಯಗಳು, ಸಂಬಂಧಗಳು, ಒಳಿತು, ಕೆಡುಕುಗಳು ಹೀಗೆ ಹತ್ತು, ಹಲವು ವಿಷಯಗಳ ಬಗ್ಗೆ ವೀಕ್ಷಕರಿಗೆ ಮನವರಿಕೆ ಮಾಡಿ ಕೊಡುವುದರಲ್ಲಿ ಯಶಸ್ವಿಯಾಗಿದೆ.

—ಎಸ್ ರವೀಂದ್ರನಾಥ ಬೆಂಗಳೂರು